ಪ್ರಬಂಧ



ಓ.ಎಲ್. ನಾಗಭೂಷಣ ಸ್ವಾಮಿ

ಕಲೆ: ಗುಜ್ಜಾರ್

# ಮಸಣ ವೈಭವ

ಸ್ಮಶಾನ ನೋಡಬೇಕು ಅಂದಿದ್ದೆ. ಕವಿತಾ ನನ್ನನ್ನೂ ಚಂದ್ರಾನೂ ಅವತ್ತು ವಿಡ್ನಿಮ್ಯಾನರ್ ಹತ್ತಿರ ಇರುವ ಸಿಮೆಟ್ರಿಗೆ ಕರೆದುಕೊಂಡು ಹೋದರು. ಅವರು ಇಂಗ್ಲೆಂಡಿನಲ್ಲಿದ್ದೂ ಅವರ ಮನೆಯ ಹತ್ತಿರವೇ ಇರುವ ಸಿಮೆಟ್ರಿಗೆ ಹೋಗಿರಲಿಲ್ಲವಂತೆ.

ಈಗ ನೆನೆದರೆ ತಮಾಷೆ ಅನಿಸತ್ತೆ. ಸ್ಮಶಾನಕ್ಕೆ ಪ್ರವೇಶವಿದೆಯೇ, ಅನ್ನುವ ಅನುಮಾನ ಕವಿತಾಗೆ ಬಂದು, ನಮ್ಮನ್ನು ಕಾರಿನಲ್ಲೇ ಕೂತಿರಲು ಹೇಳಿ, ಅಲ್ಲಿನ ಆಫೀಸಿಗೆ ಹೋಗಿ ವಿಚಾರಿಸಿದರು. 'ಇದು ಮುನಿಸಿಪಾಲಿಟಿ ನಿರ್ವಹಿಸುವ ಸಾರ್ವಜನಿಕ ಪ್ರದೇಶ. ಯಾರು ಬೇಕಾದರೂ ಬರಬಹುದು' ಅಂದರು ಅಂತ ವಾಪಸು ಬಂದು ಹೇಳಿದರು. ಸ್ಮಶಾನಕ್ಕೆ ಹೋಗಲು ಪರ್ಮಿಶನ್ ಯಾಕೆ ಬೇಕು! ಸತ್ತರೆ ಕಡ್ಡಾಯವಾಗಿ ಅಲ್ಲಿಗೇ ಹೋಗಬೇಕು. ಸತ್ತವರ ಹಕ್ಕಿನ ಜಾಗ ಅದು. ಸಾಯಲು ಹೆದರಿಕೆ, ಸಾಯಲು ಇಷ್ಟವಿಲ್ಲ, ನಾವು ಸಾಯಲ್ಲ ಅಂತೆಲ್ಲ ಅಂದುಕೊಂಡು ಬದುಕಿರುವವರು ಮಾತ್ರ ತೀರ ಅಗತ್ಯ ಬೀಳದಿದ್ದರೆ ಸ್ಮಶಾನದತ್ತ ಕಣ್ಣೂ ಹೊರಳಿಸರು.

ನಮ್ಮಪ್ಪನ ಮೊದಲ ಹೆಂಡತಿ ತೀರಿಕೊಂಡಾಗ ಅವರನ್ನು ಊರ ಪಕ್ಕದಲ್ಲಿ ಹರಿಯುವ ಜಯಮಂಗಲಾ ಹೊಳೆಯ ಪಕ್ಕದಲ್ಲಿ ಮಣ್ಣು ಮಾಡಿ ಆಲದ ಮರ ನೆಟ್ಟಿದ್ದರು. ಅದು ದೊಡ್ಡಮ್ಮನ ಸಮಾಧಿ ಅನ್ನುವುದು ನನಗೆ ತಿಳಿಯುವ ಹೊತ್ತಿಗೆ ನಾನು ಹೈಸ್ಕೂಲು ಓದುತ್ತಿದ್ದೆ. ಆ ದೊಡ್ಡ ಮರ, ಬಿಳಿಲು, ಪಕ್ಕದಲ್ಲಿ ಬರೀ ಮರಳಾಗಿ ಉಳಿದು, ಸಣ್ಣ ಗೆರೆಯಾಗಿ ಅಲ್ಲಲ್ಲಿ ಅಷ್ಟಿಷ್ಟು ಕಣ್ಣಿಗೆ ಬೀಳುತಿದ್ದ ನದಿ—ಆ ಚಿತ್ರ ಇಷ್ಟು ಸ್ಪಷ್ಟವಾಗಿ ಉಳಿದಿದೆ, ಕೊನೆಯ ಬಾರಿ ಅದನ್ನು ನೋಡಿ ನಲವತ್ತೈದು ವರ್ಷವಾದರೂ.

ನನ್ನ ಚಿಕ್ಕಮ್ಮ ಸತ್ತಾಗ ಅವರನ್ನು ಮೈಸೂರಲ್ಲಿ ಮಣ್ಣು ಮಾಡಲು ಹೋದಾಗ ನಮ್ಮಪ್ಪನನ್ನೂ ಇಲ್ಲೇ ಮಣ್ಣಿಗಿರಿಸಿದ್ದು, ಅಮ್ಮನ ಸಮಾಧಾನಕ್ಕೆ ಕಲ್ಲಿನ ಮೇಲೆ ಹೆಸರು ಕೆತ್ತಿಸಿ ಇರಿಸಿದ್ದು ಎಲ್ಲಿದೆ ಎಂದು ಹುಡುಕಿದರೆ—ವಿದ್ಯಾರಣ್ಯಪುರಂನ